# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಚನ್ನರಾಯಪಟ್ಟಣ

ಸಿ.ಸಿ. 1485/2024

ಪ್ರಮಾಣ ವಚನ ಬೋಧಿಸಲಾಯಿತು

**ಸಾಕ್ಷಿದಾರರ ಹೆಸರು** ಃ ಗುಂಡೇಗೌಡ ಚಾಸಾ- 3

ತಂದೆ **ಹೆಸರು** ಃ ಲಕ್ಕೇಗೌಡ ಪ್ರಾಸಾ- 3

**ವಯಸ್ಸು** ಃ 64 ವರ್ಷ

**ಉದ್ಯೋಗ** ಃ ವ್ಯವಸಾಯ

**ವಾಸ** ಪೋತನಹಳ್ಳಿ ದಿನಾಂಕಃ 28.11.2025

**ಮುಖ್ಯ ವಿಚಾರಣೆ ಃ- ಎ.ಪಿ.ಪಿ. ಯವರಿಂದ**

ಆರೋಪಿ ಗೊತ್ತು. ಚಾಸಾ-1 ನನ್ನ ಅಣ್ಣನ ಸೊಸೆ, ಚಾಸಾ-2 ನನ್ನ ಅಣ್ಣ, ಚಾಸಾ-4, 5 ಗೊತ್ತು. ಸುಮಾರು 1 ವರ್ಷದ ಹಿಂದೆ ಚಾಸಾ-1 ಮತ್ತು ಆಕೆಯ ಗಂಡ ಜಮೀನಿನಲ್ಲಿ ಇಕ್ಕಲು ತೆಗಿಸಲು ಹೋಗಿದ್ದು, ಜೆಸಿಬಿಯಿಂದ ಸದರಿ ಮಣ್ಣನ್ನು ತೆಗೆಸಿದ್ದರಿಂದ ಮಣ್ಣು ಕೆಳಗೆ ಕುಸಿದಿರುತ್ತದೆ. ಈ ರೀತಿ ಏಕೆ ಮಣ್ಣನ್ನು ತೆಗೆಸಿದ್ದೀಯಾ ಎಂದು ಆರೋಪಿಯು ಚಾಸಾ-1, ಆಕೆಯ ಗಂಡನನ್ನು ಕೇಳಿದ್ದು ಆ ಸಮಯದಲ್ಲಿ ಜಗಳ ಮಾಡಿಕೊಂಡು ಮನೆಯ ಬಳಿ ಚಾಸಾ-1 ಮತ್ತು ಆಕೆಯ ಗಂಡ ಬಂದಿರುತ್ತಾರೆ. ಆ ಸಮಯದಲ್ಲಿ ಆರೋಪಿಯು ಚಾಸಾ-2ರವರನ್ನು ಜೋಳದ ಒಳಗೆ ಕೆಡವಿರುತ್ತಾರೆ. ಆಗ ನಾನು ಕೇಳಲು ಹೋದಾಗ ಆರೋಪಿಯು ದೊಣ್ಣೆಯಿಂದ ನನ್ನ ಎಡಗಾಲಿಗೆ ಹಾಗೂ ತೊಡೆಗೆ ಹೊಡೆದಿರುತ್ತಾರೆ. ಆಗ ಚಾಸಾ-1 ಮತ್ತು ಆಕೆಯ ಗಂಡ ಸ್ಥಳಕ್ಕೆ ಬಂದಿರುತ್ತಾರೆ. ಆಗ ಆರೋಪಿಯು ಚಾಸಾ-1ರವರ ಗಂಡನನ್ನು ಕೆಳಗೆ ನೂಕಿದ್ದು ಕಾಯಿ ಮಟ್ಟೆಯ ಮೇಲೆ ಬಿದಿದ್ದು ನಂತರ ಎದ್ದುನಿಂತಿಕೊಂಡಿದ್ದು ಆಗ ಆರೋಪಿಯ ಕೈನಿಂದ ಚಾಸಾ-1ರವರ ಗಂಡನ ಎದೆಗೆ ಗುದಿದ್ದು ಆಗ ಚಾಸಾ-1ರವರ ಗಂಡ ಬಾಗಿಲಿನ ಹೊಸಲಿನ ಮೇಲೆ ಬಿದ್ದಿರುತ್ತಾರೆ. ಆಗ ಅವರ ತಲೆಯ ಹಿಂಭಾಗ ಬಾಗಿಲಿನ ಹೊಸಲಿಗೆ ಹೊಡೆದಿರುತ್ತದೆ. ಆಗ ಚಾಸಾ-1ರವರ ಗಂಡ ಪ್ರಜ್ಞೆ ತಪ್ಪಿ ಬಿದ್ದಿರುತ್ತಾರೆ. ಆಗ ಆಟೋದಲ್ಲಿ ಸದರಿಯವರನ್ನು ಚಾಸಾ-1, 5 ರವರು ಚನ್ನರಾಯಪಟ್ಟಣದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಾನು ಮತ್ತು ಚಾಸಾ-2ರವರು ಮನೆಯಲ್ಲಿ ಇದ್ದೇವು. ನಾನು ಪೊಲೀಸ್ ರವರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ನುರಿತ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ.** ದಾಖಲೆಗಳನ್ನು ಪರಿಶೀಲಿಸಿ **ಸಾಕ್ಷಿಯನ್ನು** ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ **ಪಾಟೀ ಸವಾಲು ಮಾಡಲು ಅನುಮತಿ**ಸಲಾಯಿತು**)**

**ಪಾಟೀ ಸವಾಲು ಃ-** ಶ್ರೀಮತಿ ಎ.ಪಿ.ಪಿ ರವರಿಂದ

ದಿಃ **17.08.2024** ರಂದು ನೀಡಿರುವ ಹೇಳಿಕೆಯಲ್ಲಿ ದಿಃ **16.08.2024** ರಂದು ಘಟನೆ ನಡೆದಿರುತ್ತದೆ ಎಂದರೆ ಸಾಕ್ಷಿಯು ನನಗೆ ದಿನಾಂಕ ಗೊತ್ತಿಲ್ಲ ಎಂದು ಹೇಳಿದರು. ಆಗ ಸಮಯ **6.30** ಸಂಜೆ ಆಗಿರುತ್ತದೆ ಎಂದರೆ ಸರಿ. ಸದರಿ ವಿಚಾರವಾಗಿ ಪೊಲೀಸ್ ರವರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹೇಳಿಕೆಯಲ್ಲಿ ನಾನು ಮತ್ತು ನನ್ನ ಮಗ ಜಮೀನಿನಲ್ಲಿ ಇಕ್ಕಲ್ಲನ್ನು ತೆಗೆಯಬೇಕಾದರೆ ಆರೋಪಿ ಏಕಏಕಿ ಜಗಳ ತೆಗೆದು ನನಗೆ ಕೈನಿಂದ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ಆಗ ನಾನು ಕಲ್ಲನ್ನು ಕಟ್ಟಿಸಿಕೊಡುತ್ತೇನೆ ಎಂದು ಚಾಸಾ-**2**ರವರು ಹೇಳಿದ್ದರು ಎಂದರೆ ಸರಿ. ನಾನು ಅಲ್ಲಿಗೆ ಹೋದೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದ ನಂತರ ನನ್ನ ಅಣ್ಣನಿಗೆ ಯಾಕೆ ಹೊಡೆಯುತ್ತೀಯಾ ಎಂದು ಕೇಳಿದಾಗ ನನಗೆ ಆರೋಪಿ ಅವಾಚ್ಯ ಶಬ್ದದಿಂದ ಬೈದು ಅಲ್ಲೇ ಬಿದಿದ್ದ ಕಬ್ಬಿಣದ ಪೈಪ್ ನಿಂದ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-**1** ಮತ್ತು ಅವರ ಗಂಡ ಜಗಳ ಬಿಡಿಸಲು ಬಂದರು ಎಂದರೆ ಸರಿ. ಆಗ ಆರೋಪಿಯು ನನ್ನ ಅಣ್ಣನ ಮಗನಿಗೆ ಕೈಮುಷ್ಟಿಯಿಂದ ಅವರ ಎದೆಗೆ ಹೊಡೆದರು ಎಂದರೆ ಸರಿ. ಆಗ ನನ್ನ ಅಣ್ಣನ ಮಗ ಅಲ್ಲೇ ಬಿದ್ದು ಪ್ರಜ್ಞೆ ಕಳೆದುಕೊಂಡರು ಎಂದರೆ ಸರಿ. ಅವರನ್ನು ಚಾಸಾ-**5** ರವರ ಜೊತೆ ಚನ್ನರಾಯಪಟ್ಟಣ ನಾಗೇಶ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಂತರ ಅದೇ ದಿನ ನಾಗೇಶ್ ಆಸ್ಪತ್ರೆಯಿಂದ, ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಆಸ್ಪತ್ರೆಯ ವೈದ್ಯರು ನನ್ನ ಅಣ್ಣನ ಮಗನನ್ನು ಪರೀಕ್ಷೆ ಮಾಡಿ ಮರಣ ಹೊಂದಿದ್ದಾರೆ ಎಂದು ಹೇಳಿದರು ಎಂದರೆ ಸರಿ. ಈ ರೀತಿಯಾಗಿ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ನಂತರ ದಿಃ **14.11.2024** ರಂದು ಪೊಲೀಸ್ ರವರಿಗೆ ಮರು ಹೇಳಿಕೆ ನೀಡಿದ್ದು ಅದರಲ್ಲಿ ನನಗೆ ಮತ್ತು ಚಾಸಾ-**2**ರವರಿಗೂ ಆರೋಪಿ ತಳ್ಳಾಟಾ ಹಾಗೂ ನೂಕಾಟ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ-**1** ಮತ್ತು ನನ್ನ ಅಣ್ಣನ ಮಗ ಬಂದಿದ್ದು ನನ್ನ ಅಣ್ಣನ ಮಗ ಅಲ್ಲೇ ಬಿದಿದ್ದ ತೆಂಗಿನ ಕಾಯಿ ಮಟ್ಟೆ ಮೇಲೆ ಬಿದ್ದರು ಎಂದರೆ ಸರಿ. ಆಗ ನನ್ನ ಅಣ್ಣನ ಮಗ ಮೇಲೆ ಎದ್ದೇಳಲಿಲ್ಲ ಎಂದರೆ ಸರಿಯಲ್ಲ ಎಂದು ನುಡಿದು ಆರೀತಿ ಕಾಯಿ ಮಟ್ಟೆ ಮೇಲೆ ಬಿದ್ದ ನಂತರ ನನ್ನ ಅಣ್ಣನ ಮಗ ಮೇಲೆ ಎದಿದ್ದು ಆಗ ಆರೋಪಿಯು ನನ್ನ ಅಣ್ಣನ ಮಗನ ಕೊರಳ ಪಟ್ಟಿ ಹಿಡಿದು ಹಿಂದಕ್ಕೆ ನೂಕಿದ್ದು ನನ್ನ ಅಣ್ಣನ ಮಗನ ತಲೆಗೆ ಹೊಸಲಿನ ಪಟ್ಟಿ ತಾಗಿ

ಸ್ಥಳದಲ್ಲೇ ಮರಣ ಹೊಂದಿರುತ್ತಾರೆ ಎಂದು ಹೇಳಿದರು. ಈ ಮೊದಲು ಹೃದಯ ಸಂಬಂಧ ಖಾಯಿಲೆ ಇತ್ತು ಎಂದರೆ ಸರಿ. ಆದಾ ಕಾರಣ ಅವರಿಗೆ ಸ್ಟಂಟ್ ನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರಿಂದ ನನ್ನ ಅಣ್ಣನ ಮಗ ಸ್ಥಳದಲ್ಲೇ ಹೃದಯಘಾತವಾಗಿ ಅಲ್ಲಿಯೇ ಮರಣ ಹೊಂದಿರುತ್ತಾರೆ ಎಂದು ನನ್ನ ಮುಂದುವರೆದ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲಗಳೆದ ಹೇಳಿಕೆಯ ಭಾಗವನ್ನು ನಿಪಿ-6, 7 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಆರೋಪಿಯ ಪರ ವಕೀಲರು ಪಾಟೀಸವಾಲು ಮಾಡಲು ಸಮಯ ಕೇಳಿದ್ದರಿಂದ ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇ.ಎ.ಓ.,**

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ